ತಿಳಿವಳಿಕೆಯೂ ಇದೆ. ಒಮ್ಮೊಮ್ಮೆ ಅವರು ಅಧ್ಯಕ್ಷರ ಕಾರನ್ನು ಚಲಾಯಿಸಿ ಕರೆದುಕೊಂಡು ಹೋಗುತ್ತಿದ್ದರು. ರಾಜಕೀಯದಲ್ಲಿ ಅವರಿಗೆ ಬಹಳಷ್ಟು ತಿಳುವಳಿಕೆಯಿದೆಯೆಂಬುದು ಡೈನಿಂಗ್ ಟೇಬಲ್ಲಿನ ಸುತ್ತ ಕುಳಿತಾಗ ತಿಳಿಯಿತು. ಸುಮಕ್ಕ ಯಾವುದೇ ವಿಷಯ ಹೇಳಿದರೂ ಅದು ಸರಿಯಾಗಿಯೇ ಇರುತ್ತದೆ. ಕೆಲವೊಮ್ಮೆ ಅವು ಚಲಾವಣೆಗೂ ಬರುತ್ತವೆಯೆಂದು ನಾನು ಅರ್ಥೈಸಿಕೊಂಡೆ. ಅಧ್ಯಕ್ಷರದ್ದು ಕೆಲವೊಮ್ಮೆ ಆಧಾರರಹಿತ ಮಾತುಗಳು.

ಅಧ್ಯಕ್ಷರ ಮಗಳು ಸುಂದರಿ. ಸುಮಿತ್ರಾಳಿಗಿಂತಲೂ ಎಷ್ಟೋ ಪಾಲು ಮೇಲು. ಕಾಲೇಜು ಶಿಕ್ಷಣ ಮುಗಿದದ್ದಷ್ಟೆ. ಕಾದಂಬರಿ ಓದು, ಸ್ಟಾಂಪು ಸಂಗ್ರಹ ಈಗಿನ ಹವ್ಯಾಸ. ರೇಡಿಯೋದಲ್ಲಿ ಬರುವ ಗೀತೆಗಳು ಬಹಳ ಇಷ್ಟ. ತ್ರೀಬ್ಯಾಂಡ್ ಸ್ಯಾನ್ಯೋ ಟ್ರಾನ್ಸಿಸ್ಟರ್ ರೇಡಿಯೋ ಅವಳಲ್ಲಿದೆ.

ಇವಳನ್ನು ಮದುವೆಯಾಗಲು ಸಾಧ್ಯವಾಗುವುದಾದರೆ... ನಾನು ಕನಸು ಕಂಡೆ. ಆದರೆ ಕನಸು ನನಸಾಗಬೇಕಲ್ಲವೆ? ಮಗಳಿಗೆ ಬರುವ ಮದುವೆಯ ಪ್ರಸ್ತಾಪಗಳೆಲ್ಲಾ ತಪ್ಪಿಹೋಗುತ್ತಿದ್ದವು. ಜಾತಕ ಹೊಂದಾಣಿಕೆಯಾಗದಿರುವುದೇ ಪ್ರಮುಖ ಕಾರಣ. ಈ ವಿಷಯದಲ್ಲಿ ದಂಪತಿ ಖಿನ್ನರಾಗಿದ್ದರು.

ಸಹಕಾರ ಬ್ಯಾಂಕ್‌ನಲ್ಲಿ ಕ್ಯಾಷಿಯರ್ ಕೆಲಸದಲ್ಲಿ ಸಿಕ್ಕಿದ ತಕ್ಷಣ ನನ್ನ ನಿವಾಸವನ್ನು ಬ್ಯಾಂಕ್‌ಗೆ ಸೇರಿಕೊಂಡಿರುವ ಗೆಸ್ಟ್‌ಹೌಸಿಗೆ ಬದಲಾಯಿಸಲಾಯಿತು. ಅಧ್ಯಕ್ಷರು ಹಾಗೂ ಕಾರ್ಯದರ್ಶಿಯವರ ಖಾಸಗಿ ಕೊಠಡಿಯಾಗಿತ್ತದು. ಬ್ಯಾಂಕ್ ಖರ್ಚಿನಲ್ಲಿ ಗಾಂಧಿಜಯಂತಿ ಮತ್ತು ಸ್ವಾತಂತ್ರ್ಯ ದಿನಾಚರಣೆಯ ನಂತರ ಸಂಜೆಗೆ ರಂಗಾಗಲು ಬಳಸುವ ಕೊಠಡಿ ಕೂಡ.

‘ಪರವಾಗಿಲ್ಲ, ಇದು ಸದ್ಯಕ್ಕೆ ತಾನೆ?’ಎಂದು ಅಧ್ಯಕ್ಷರು ಸಮಾಧಾನಪಟ್ಟುಕೊಂಡರು.

ಒಂದು ಗಾಂಧಿ ಜಯಂತಿಯೆಂದು ಅಧ್ಯಕ್ಷರು ಕೊಂಚ ಹೆಚ್ಚಿಗೆ ಮಿಂಚಿಬಿಟ್ಟರು. ನಾನು ಕುಡಿಯುವುದಿಲ್ಲವೆಂದು ಹೇಳಿದ್ದುದರಿಂದ ಮನೆಯಲ್ಲೇ ತಯಾರಿಸಿದ ವೈನನ್ನು ತಂದಿಟ್ಟಿದ್ದರು.

‘ಒಳ್ಳೆಯ ದ್ರಾಕ್ಷಿಯಿಂದ ನಮ್ಮವರೇ ತಯಾರಿಸಿದ ವೈನು, ಕುಡಿದು ತೇಗು’.

ನಾನು ಹೆಸರಿಗಷ್ಟೆ ಅದನ್ನು ಕುಡಿದೆ. ಅಂತಹ ರುಚಿಯಿದೆಯೆಂದು ಅನ್ನಿಸಲಿಲ್ಲ. ಬ್ರಾಂದಿ ಬಾಟಲಿ ಸಂಪೂರ್ಣ ಖಾಲಿಯಾದ ಕೂಡಲೆ ಕಾರ್ಯದರ್ಶಿ ಮನೆಯ ದಾರಿ ಹಿಡಿದರು. ಮಾಂಸದ ತುಣುಕುಗಳನ್ನು ಸುತ್ತಿದ್ದ ಬಾಳೆಯೆಲೆ ಹಾಗೂ ಖಾಲಿ ಬಾಟಲಿಯನ್ನು ಎಸೆಯಲು ಎತ್ತಿಕೊಂಡಾಗ ಅಧ್ಯಕ್ಷರು ಕೇಳಿದರು.

‘ನಿನಗೆ ನನ್ನ ಮಗಳು ಹಿಡಿಸಿದ್ದಾಳಾ? ಚೆನ್ನಾಗಿ ಯೋಚಿಸಿ ಹೇಳು’.

ಕುಡಿತದ ಅಮಲಿನಲ್ಲಿದ್ದ ಅಧ್ಯಕ್ಷರ ಮಾತನ್ನು ಅಷ್ಟಾಗಿ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಕಾರಿಗೆ ಹತ್ತಿಸಿ ಅಧ್ಯಕ್ಷರನ್ನು ಮನೆಗೆ ತಲುಪಿಸಿದೆ. ಸುಮಕ್ಕ ಮತ್ತು ನಾನು ಸೇರಿ ಅವರನ್ನು ಹೇಗೋ ಕೋಣೆಯೊಳಕ್ಕೆ ಸೇರಿಸಿದೆವು. ಊಟ ಮಾಡಿಯೇ ಹೋಗಬೇಕೆಂಬ ನಿಬಂಧನೆಯನ್ನು ಸುಮಕ್ಕ ನನ್ನ ಮುಂದಿಟ್ಟರು.

ಊಟವಾದ ನಂತರ ನಾನು ಕುರ್ಚಿಯಲ್ಲಿ ಆರಾಮವಾಗಿ ಕುಳಿತುಕೊಂಡೆ. ಸುಮಕ್ಕನೂ ನನ್ನ ಎದುರುಗಡೆ ಕುಳಿತುಕೊಂಡರು. ಅವರು ನನ್ನನ್ನೇ ನೋಡುತ್ತಾ ಒಂದು ಪ್ರಶ್ನೆಯನ್ನು ನನ್ನತ್ತ ಎಸೆದರು.

‘ನಿನಗೆ ನನ್ನ ಮಗಳು ಇಷ್ಟವಾದಳಾ?’ ನಾನು ಸುಮಕ್ಕನ ಮುಖವನ್ನೇ ನೋಡಿದೆ.

‘ಮತ್ತೆ? ಅವಳನ್ನು ಯಾರಿಗೆ ಇಷ್ಟವಾಗಲ್ಲ ಹೇಳಿ?’

‘ಹಾಗಲ್ಲ, ಅವಳು ಸುಂದರೀನಾ?’

‘ಅಲ್ವೆ ಮತ್ತೆ?’

‘ಹಾಗಾದರೆ ಅವಳನ್ನು ನೀನು ಮದುವೆಯಾಗಬಾರದಾ?’

‘ಅವಳಿಗೆ ನಾನು ಇಷ್ಟಾನಾ?’

‘ಅವಳಿಗೆ ಇಷ್ಟವೇ. ಅದರ ಬಗ್ಗೆ ನೀನು ಯೋಚಿಸಬೇಡ. ನಮಗೆ ಬೇಕಾಗಿರೋದು ನಿನ್ನ ಇಷ್ಟ.’ ತಕ್ಷಣ ಉತ್ತರಿಸುವುದು ಸರಿಯಲ್ಲವೆಂದುಕೊಂಡೆ. ನಾನು ಸ್ವಲ್ಪ ಹೊತ್ತು ಯೋಚಿಸುವವನಂತೆ ನಟಿಸಿದೆ. ಅನಂತರ ಹೇಳಿದೆ.

‘ಎಲ್ಲರಿಗೂ ಇಷ್ಟವಾದರೆ ನನ್ನದೇನೂ ಅಭ್ಯಂತರವಿಲ್ಲ’.

ನಾನು ಜಯರಾಮನ ಕುರಿತು ಯೋಚಿಸಿದೆ. ಅವನ ಮಾತು ಬಾಲಿಶವೆನಿಸಿದರೂ ಅವನಿಗೂ ಭವಿಷ್ಯ ನುಡಿಯುವ ತಾಕತ್ತಿದೆ. ಅವನು ಹೇಳಿದಂತೆ ಎಲ್ಲವೂ ನಡೆಯುತ್ತಿದೆ!

### ಅಧ್ಯಾಯ–8

ಸುಮಿತ್ರಾಳನ್ನು ಜ್ಞಾಪಿಸಿಕೊಳ್ಳಲು ನನಗೆ ಬಿಡುವೇ ಸಿಗಲಿಲ್ಲ. ಅದಕ್ಕೆಕಾರಣ ಶ್ರೀದೇವಿ. ಮದುವೆ ಬೇಗನೆ ಮುಗಿಸಿ ಬಿಡಬೇಕೆಂಬುದು ಅಧ್ಯಕ್ಷರ ವಾದ. ಅಷ್ಟೊಂದು ಅವಸರದಲ್ಲಿ ಬೇಡವೆಂಬುದು ಸುಮಕ್ಕನ ಅಭಿಪ್ರಾಯ. ನಿನ್ನೆ ಎಲ್ಲಿಂದಲೋ ಬಂದವನಿಗೆ ಇದ್ದಕ್ಕಿದ್ದಂತೆ ಇಂದು ಮಗಳನ್ನು ಕಟ್ಟಿಕೊಟ್ಟರೆ ಜನ ಏನಂದಾರು? ಅದು ಅವರ ಅಭಿಪ್ರಾಯದ ಹಿಂದಿನ ರಹಸ್ಯವಿರಬಹುದು.

ಮದುವೆಗೆ ನನ್ನ ಮನೆಯಿಂದ ಬರಲು ಯಾರೂ ಇಲ್ಲವೆಂದು ನಾನು ಅವರಿಗೆ ಮನದಟ್ಟು ಮಾಡಿದ್ದೆ. ಒಂದು ವಿಷಯವನ್ನು ಇತರರಿಗೆ ಹೇಳಿ ನಂಬಿಸುವುದರಲ್ಲಿ ನಾನು ಹಿಂದಿನಿಂದಲೂ ನಿಪುಣ. ಕಾಣದಿರುವ ಘಟನೆಯನ್ನು ಕಣ್ಣಿಗೆ ಕಟ್ಟುವಂತೆ ಬೇರೆಯವರಿಗೆ ಹೇಳಬಲ್ಲೆ. ಇಲ್ಲದೇ ಇರುವುದನ್ನು ಇದ್ದಂತೆ ವಿವರಿಸಲು ನಾನು ನಿಸ್ಸೀಮ. ಯಾವುದೇ ರೀತಿಯ ಹುಸಿಯ ಸೋಂಕಿಲ್ಲದ ಹಸಿ ಹಸಿಯಾಗಿ ನಾನದನ್ನು ಅಧ್ಯಕ್ಷರಿಗೆ ಹೇಳಿದೆ.

‘ಸಿಡುಬಿನಿಂದ ಅಪ್ಪ, ಅಮ್ಮ ಇದ್ದ ಏಕೈಕ ಸೋದರಿ...’ ಅನಂತರ ಅಮ್ಮನನ್ನು ಕಡೆಗಣಿಸಿದ ಮಾವನ ಕುರಿತು ರಂಗುರಂಗಾಗಿ ಕತೆ ಹೆಣೆದು ಹೇಳಿದೆ.

‘ಹೋಗಲಿ ಬಿಡಯ್ಯ. ಈಗ ನಿನ್ನ ತಂದೆ, ತಾಯಿ, ಮಾವ ಎಲ್ಲಾ ನಾನೇ. ನೀನು ನನ್ನ ಮಗಳನ್ನು ಮದುವೆಯಾಗ್ತೀಯ. ಉಳಿದಿದ್ದೆಲ್ಲಾ ಗೌಣ’ ಅವರು ಹೇಳಿದರು.

‘ಮದುವೆಗೆ ಮುಂಚೆ ಕೆಲವು ವಿಷಯಗಳಿವೆಯಲ್ಲ? ಎಂಗೇಜ್‌ಮೆಂಟ್ ಆದ ನಂತರ ಹಾಗೂ ಮದುವೆಯ ಮುಂಚಿನ ದಿನಗಳು ಬದುಕಿನ ಅತ್ಯಂತ ರೋಚಕ ದಿನಗಳು. ಬರೋಬ್ಬರಿ ಎಂಟು ತಿಂಗಳು ಅದನ್ನು ಎಂಜಾಯ್ ಮಾಡು. ಅನಂತರ ಮದುವೆ. ಆದರೆ ಒಂದೇ ಒಂದು ಕಂಡೀಷನ್... ಊರವರು ಆಡ್ಕೊಳ್ಳುವಂಗೆ ನಡ್ಕೋಬಾರದು ಅಷ್ಟೆ’ ಸುಮಕ್ಕ ಮಾತು ಸೇರಿಸಿದರು.

ಸುಮಕ್ಕನನ್ನ ಇನ್ನು ಅಕ್ಕಾಂತ ಕರೆಯುವುದು ಸರಿಯೆ? ಅಮ್ಮನೆಂದು ಕರೆಯುವ ವಯಸ್ಸೂ ಅವರಿಗಾಗಿಲ್ಲ. ಅತ್ತೇಂತ ಕರೆದರೆ ಹೇಗೆ? ಆಂಟೀಂತ... ಉತ್ತರ ಸಿಗದೆ ನಾನು ತೊಳಲಾಡಿದೆ.

‘ನೀನು ಸುಮಕ್ಕಾಂತ್ಲೇ ಕರಿ. ಅದರ ಖುಷೀನೇ ಬೇರೆ ಕಣೋ...’

ಅಧ್ಯಕ್ಷರನ್ನು ಮಾತ್ರ ನಾನು ಅಂಕಲ್ ಎಂದೇ ಕರೆದೆ. ಅಂಕಲ್‌ಗೂ ಅದು ಇಷ್ಟವೇ.

ಇವೆಲ್ಲದರ ನಡುವೆ ನನ್ನನ್ನು ಮಂಡಲ ಸಮಿತಿಯ ಸದಸ್ಯರನ್ನಾಗಿ ಮಾಡಲಾಯಿತು. ಯುವ ವಿಭಾಗದ ಜವಾಬ್ದಾರಿಯನ್ನು ನನಗೆ ವಹಿಸಿದರು. ಹಳೆಯದರಂತೆ ಕೆಲಸ ಮಾಡುವ ಆಸಕ್ತಿ ನನಗಿರಲಿಲ್ಲ. ಆದರೂ ನಾನೊಬ್ಬ ನಾಯಕನೆಂಬಂತೆ ನಡೆದುಕೊಂಡೆ. ಒಂದಿಷ್ಟು ಯುವ ಪಡೆ ನನಗೆ ಜೊತೆಯಾದರು. ಅವರು ಎಲ್ಲಕ್ಕೂ ತಯಾರಾಗಿದ್ದರು. ಅದು ಇರುವುದೇ ಹಾಗೆ. ಜನ ಒಬ್ಬ ನಾಯಕ ಸಿಗುವುದನ್ನೇ ಕಾಯುತ್ತಿರುತ್ತಾರೆ. ಅನುಯಾಯಿಯಾಗಿ ಅವರು ಎಲ್ಲವನ್ನು ನಾಯಕನಿಗೆ ಸಮರ್ಪಿಸಿಬಿಡುತ್ತಾರೆ. ಅವರನ್ನೆಲ್ಲಾ ನಾಯಕ ಗಮನಿಸಬೇಕಾದುದು ಅನಿವಾರ್ಯ.

ಎಂಟು ತಿಂಗಳು ನನ್ನ ಬದುಕಿನ ಅತ್ಯಂತ ಸುಮಧುರವಾದ ಕಾಲವಾಗಿತ್ತು. ಸುಮಕ್ಕ ಹೇಳಿದಂತೆ ಎಂಟು ತಿಂಗಳ ನಂತರ ಮದುವೆ. ಈ ನಡುವೆ ನನ್ನ ಸುಂದರವಾದ ಹಸ್ತಾಕ್ಷರದಲ್ಲಿ ನಾನವಳಿಗೆ ಒಂದಷ್ಟು ಪತ್ರಗಳನ್ನು ಬರೆದೆ. ಪ್ರೇಮಪತ್ರವನ್ನು ಬರೆಯುವ ಯಾರೇ ಆಗಲಿ ಅವರು ಕವಿಯಾಗಿ ಬಿಡುತ್ತಾರೆ. ಅದನ್ನು ಮತ್ತೊಂದು ರೀತಿಯಲ್ಲಿಯೂ ಹೇಳಬಹುದು. ಪ್ರೇಮಪತ್ರಗಳೆಲ್ಲಾ ಕವಿತೆಗಳೇ. ಸೂರ್ಯ, ಸೂರ್ಯಕಾಂತಿ, ಗುಲಾಬಿ ಹೂ, ಪತಂಗಗಳು ಇಂತಹ ಪತ್ರಗಳಲ್ಲಿ ಸ್ಥಾನ ಪಡೆಯುತ್ತವೆ. ನಾನು ಬಿ.ಎ. ಓದುವಾಗ ಶಾಕುಂತಳೆಯ ಪಾಠವಿತ್ತು. ಅದನ್ನು ನನ್ನ ಪ್ರೇಮಪತ್ರದಲ್ಲಿ ತಂದೆ. ಅದರಲ್ಲಿ ಬರುವ ಉತ್ಪ್ರೇಕ್ಷೆ, ರೂಪಕಗಳನ್ನು ಸೇರಿಸಿ ನಾನು ಒಂದಷ್ಟು ಪತ್ರಗಳನ್ನು ಬರೆದೆ. ಹತ್ತಡಿ ಸಂಕದ ಕೆಳಗಿನಿಂದ ತೇಲಿಹೋದ ಮೊದಲ ಪ್ರಣಯ ಲೇಖನದ ತುಣುಕುಗಳಿಂದ ಒಂದು ಸಾವಿರ ಪುಟಗಳು ಪುನರ್ಜನ್ಮ ಪಡೆದವು.

‘ದೇವೀ...’ ಆ ನನ್ನ ಕರೆಯಲ್ಲೇ ಅವಳು ನನಗೆ ಶರಣಾದಳು. ಅವಳ ಪತ್ರಗಳಲ್ಲಿ ತುಂಬಾ ಕಥೆಗಳಿದ್ದವು. ರೊಮ್ಯಾಂಟಿಕ್ ಕಥೆಗಳು. ಎರಡು ದೇಗುಲಗಳ ಕಥೆಯನ್ನು ಅವಳು ಮೊದಲು ಬರೆದಳು. ಮುಖಾಮುಖಿಯಾಗಿ ನಿಂತಿರುವ ಎರಡು ದೇಗುಲಗಳು. ದೇಗುಲದ ಮುಖ್ಯದ್ವಾರಗಳು ತೆರೆಯುವಾಗ ಮಾತ್ರ ಪರಸ್ಪರ ಎದುರಾಗುವ ದೇವಿ ಮತ್ತು ದೇವ.